

**ಬೆಡ್:** ಆಸ್ಪತ್ರೆಯ ಕೊಳೆತ ಬೆಡ್‌ಗಳ ಕಲಾಕೃತಿ

**ದಾಖಲಾತಿ ಸಂಸ್ಕೃತಿಯಿಲ್ಲ ಅಂತ ದೂರುತ್ತಾರೆ. ಮ್ಯೂಸಿಯಂ ಒಂದು ಬಗೆಯ ಪಾಶ್ಚಿಮಾತ್ಯ ಕಲ್ಪನೆಯಲ್ಲವಾ?**

ನಮ್ಮ ಸಮಸ್ಯೆ ಏನು ಅಂತಂದ್ರೆ, ಇಲ್ಲ ಅನ್ನೋದನ್ನ ಒಪ್ಪೋಕೆ ತಯಾರಿಲ್ಲದೆ ಇರೋದು. ಯಾವುದೇ ಸಮಸ್ಯೆಯನ್ನ ಬಿಡಿಸಬೇಕು ಅಂತಾದ್ರೆ, ಅದು ಇದೆ ಅಂತ ಮೊದಲು ಒಪ್ಪಿಕೋಬೇಕು. ಆಗ ಮುಂದೆ ಸಲ್ಯೂಶನ್‌ಗೆ ಯೋಚನೆ ಮಾಡಬಹುದು. ನಮ್ಮ ಹತ್ರ ಪರಂಪರೆ ಇದೆ. ಆದರೆ, ದಾಖಲಾತಿ ಇಲ್ಲ. ಕಾಲ ಬದಲಾಗ್ತಾ ಇದೆ. ಟೆಕ್ನಾಲಜಿಯಿಂದ ವೇಗ ಜಾಸ್ತಿಯಾಗ್ತಾ ಇದೆ. ಉದಾಹರಣೆಗೆ, ಮಣಿಪಾಲದಲ್ಲಿ ಹೆರಿಟೇಜ್ ಮ್ಯೂಸಿಯಂ ಇದೆ. ಆದರೆ, ಅದರ ಬೇಸಿಕ್ ಡಾಕ್ಯುಮೆಂಟೇಶನ್ ಕಡಿಮೆಯಿದೆ. ಮ್ಯೂಸಿಯಂ ಮಾಡಿದವರು ತೀರ್ಕೊಂಡಿದ್ದಾರೆ. ಅವರು ಮೌಖಿಕ ಸಂಸ್ಕೃತಿಯನ್ನು ನಂಬಿದವರು. ಆದರೆ, ಡಾಕ್ಯೂಮೆಂಟೇಶನ್ ಇಲ್ಲ ಅಂತಂದ್ರೆ ಅದರ ಪ್ರಾಮುಖ್ಯತೆ ಮುಂದಿನ ತಲೆಮಾರಿಗೆ ಪಾಸ್ ಮಾಡ್ಲಿಕ್ಕೆ ಆಗೋಲ್ಲ. ಸಂಶೋಧನೆ ಮಾಡುವವರು ಅನಗತ್ಯವಾಗಿ ದಾಖಲೆಗಾಗಿ ಕಾಲವನ್ನ ವ್ಯರ್ಥ ಮಾಡಬೇಕಾಗ್ತದೆ. ಮಾಹಿತಿ ಇದ್ದರೆ, ರಿಸರ್ಚ್ ಮಾಡುವುದಕ್ಕೆ ಉಪಯೋಗ ಆಗುತ್ತೆ. ನಮ್ಮ ಹತ್ರ ಆ ವ್ಯವಸ್ಥೆ ಇಲ್ಲದಿರೋದರಿಂದ ಮ್ಯೂಸಿಯಂಗಳ ಅಗತ್ಯವಿದೆ. ಇಲ್ಲದಿದ್ದರೆ ನಾವು ತಕ್ಷಣ ಅಪ್ರಸ್ತುತಗೊಂಡು ಬಿಡ್ತೇವೆ.

◆ **ಮನುಷ್ಯರ ಭಾಗವಹಿಸುವಿಕೆ ಸಂಬಂಧವಿಲ್ಲದೆ ಗಾಜಿನ ಹಿಂದೆ ಇಡಲಾದ ವಸ್ತುಗಳಿರುವ ಇಂತಹ ಮ್ಯೂಸಿಯಂ ಮೇಲೆ ನೀವು ಅಧ್ಯಯನ ಮಾಡಿದಿರಿ. ನಾವು ನೋಡಿದ ಮೆಕ್ಕಿಕಟ್ಟೆಯಲ್ಲಿ ಕಾಷ್ಠಶಿಲ್ಪಗಳ ಜೊತೆ ಜನರಿಗೆ ಕೇವಲ ಪ್ರೇಕ್ಷಕ ಸಂಬಂಧವಿಲ್ಲ. ಪಾರ್ಟಿಸಿಪೇಟರಿ ಸಂಬಂಧವಿದೆ. ಎರಡು ವಿಭಿನ್ನ ಜಗತ್ತುಗಳಿವು. ಈ ವೈರುಧ್ಯವನ್ನು ಹೇಗೆ ಗ್ರಹಿಸ್ತೀರಿ?**